ಕರ್ನಾಟಕ ಸರ್ಕಾರ
ಸಮಗ್ರ ಮಕ್ಕಳ ರಕ್ಷಣಾ ಯೋಜನೆ
C/o ನಿರ್ದೇಶನಾಲಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಒಂದನೇ ಮಹಡಿ, ಬಹು ಮಹಡಿಗಳ ಕಟ್ಟಡ, ಡಾ॥ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು-560 001, ಕರ್ನಾಟಕ
E-mail ID:icps.kar@gmail.com Phone No: 080-22879381

ಸಂಖ್ಯೆ:ಕರಾಸಮರಸೊ/TCP/17/ 2020-21 ದಿನಾಂಕ:04-08-2020 05

ಗೆ,

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು
ಜಿಲ್ಲಾ ಮಕ್ಕಳ ರಕ್ಷಣಾ ಘಟಕ
30 ಜಿಲ್ಲೆಗಳು.

ಮಾನ್ಯರೇ,

ವಿಷಯ: ಮಕ್ಕಳ ಪಾಲನಾ ಸಂಸ್ಥೆಗಳಲ್ಲಿರುವ ಮಕ್ಕಳ ಮಾಹಿತಿಯನ್ನು ಟ್ರ್ಯಾಕ್‌ಚೈಲ್ಡ್ ಪೋರ್ಟಲ್‌ನಲ್ಲಿ ಕಡ್ಡಾಯವಾಗಿ ಅಳವಡಿಸುವ ಕುರಿತು.

ಉಲ್ಲೇಖ: ಸಂಖ್ಯೆ:ಕರಾಸಮರಸೊ/TCP/17/2020-21 ದಿನಾಂಕ: 30-07-2020

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದಲ್ಲಿ ಈಗಾಗಲೇ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ದಾಖಲಾಗುವ ಮಕ್ಕಳ ಮಾಹಿತಿಯನ್ನು ಟ್ರ್ಯಾಕ್‌ಚೈಲ್ಡ್ ಪೋರ್ಟಲ್‌ನಲ್ಲಿ ಅಳವಡಿಸಲು ಸೂಕ್ತ ಮಾರ್ಗದರ್ಶನ ನೀಡಲಾಗಿದೆ. ಸದರಿ ಪತ್ರದಲ್ಲಿ ನೀಡಿರುವ ವಿಷಯವನ್ನು ಮುಂದುವರಿಸುತ್ತ ಮಕ್ಕಳ ಮಾಹಿತಿಯನ್ನು ಅಳವಡಿಸುವಾಗ ಈ ಕೆಳಕಂಡ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಕ್ರಮವಹಿಸಲು ಸೂಚಿಸಿದೆ.

1. ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಕೋವಿಡ್-19ರ ಪರಿಸ್ಥಿತಿಗೂ ಮುನ್ನ ಇದ್ದ ಮಕ್ಕಳ ಮಾಹಿತಿಯನ್ನು ಈಗಾಗಲೇ ಟ್ರ್ಯಾಕ್‌ಚೈಲ್ಡ್ ಪೋರ್ಟಲ್‌ನಲ್ಲಿ ನಮೂದಿಸಿದ್ದರೆ ಅಂಥಹ ಮಕ್ಕಳ ಮಾಹಿತಿಯನ್ನು ಪೋರ್ಟಲ್‌ನಿಂದ ತೆಗೆದು ಹಾಕಬಾರದು. ಆದಾಗ್ಯೂ ಮಕ್ಕಳು ಶಾಲೆ ಪ್ರಾರಂಭವಾದ ನಂತರ ಸಂಸ್ಥೆಗೆ ಮರಳಿ ಬರುವುದಿಲ್ಲವಾದರೆ ಅಂದರೆ ಮಕ್ಕಳನ್ನು ಖಾಯಂ ಆಗಿ ಅವರ ಪೋಷಕರ ವಶಕ್ಕೆ ನೀಡಿದಲ್ಲಿ ಅಂತಹ ಮಕ್ಕಳ ಮಾಹಿತಿಯನ್ನು ಮಾತ್ರ ಪೋರ್ಟಲ್‌ನಿಂದ ನಿಯಮಾನುಸಾರ ರಿಲೀಸ್ಡ್ ಎಂದು ನಮೂದಿಸಿ ತೆಗೆದುಹಾಕಬೇಕು.
2. ಪ್ರಸ್ತುತ ತಾರಿಣಿ ಸಾಫ್ಟ್‌ವೇರ್‌ನಲ್ಲಿ ನೀಡುತ್ತಿರುವ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಹಾಲಿ ಇರುವ ಎಲ್ಲ ಮಕ್ಕಳ ಮಾಹಿತಿಯನ್ನು ಕಡ್ಡಾಯವಾಗಿ ಅಳವಡಿಸುವುದು.
3. ಕೋವಿಡ್-19 ಪರಿಸ್ಥಿತಿಯ ಕಾರಣ ಮನೆಗೆ ಹೋಗಿರುವ ಮಕ್ಕಳು ಮರಳಿ ಸಂಸ್ಥೆಗೆ ದಾಖಲಾಗುವ ಪ್ರಕರಣಗಳಲ್ಲಿ ಮಾತ್ರ ಯಾವ ಮಕ್ಕಳ ಮಾಹಿತಿಯನ್ನು ಟ್ರ್ಯಾಕ್‌ಚೈಲ್ಡ್ ಪೋರ್ಟಲ್‌ನಲ್ಲಿ ಈ ಹಿಂದೆ ಅಳವಡಿಸಿಲ್ಲವೋ ಅಂತಹವರ ಮಾಹಿತಿಯನ್ನು ಸಹ ಟ್ರ್ಯಾಕ್‌ಚೈಲ್ಡ್ ಪೋರ್ಟಲ್‌ನಲ್ಲಿ ಅಳವಡಿಸಲು ಕ್ರಮವಹಿಸುವುದು.
4. ಈಗಾಗಲೇ ಟ್ರ್ಯಾಕ್‌ಚೈಲ್ಡ್ ಪೋರ್ಟಲ್‌ನಲ್ಲಿ ಬೇರೆ ಬೇರೆ ವರ್ಷಗಳಲ್ಲಿ ಸಂಸ್ಥೆಗೆ ದಾಖಲಾದ ಮಕ್ಕಳ ಮಾಹಿತಿಯನ್ನು ಅಳವಡಿಸಿದ್ದಲ್ಲಿ, ಸದರಿ ಮಕ್ಕಳು ಆಯಾ ವರ್ಷಗಳಲ್ಲಿ ಅಥವಾ ಮುಂದಿನ ದಿನಗಳಲ್ಲಿ ಸಂಸ್ಥೆಯಿಂದ ಬಿಡುಗಡೆಯಾಗಿ ಹೋಗಿದ್ದಲ್ಲಿ ಅಂತಹ ಮಕ್ಕಳ ಮಾಹಿತಿಯನ್ನು ಸಹ ಟ್ರ್ಯಾಕ್‌ಚೈಲ್ಡ್ ಪೋರ್ಟಲ್‌ನಿಂದ ನಿಯಮಾನುಸಾರ ತೆಗೆದುಹಾಕುವುದು.

ಒಟ್ಟಾರೆಯಾಗಿ ಪ್ರಸ್ತುತ ಮಕ್ಕಳ ಪಾಲನಾ ಸಂಸ್ಥೆಯಲ್ಲಿ ತಾರಿಣಿ ಆಪ್‌ನ ಪ್ರಕಾರ ಹಾಜರಿರುವ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಹಾಗೂ ಕೋವಿಡ್ ಪರಿಸ್ಥಿತಿಯ ಕಾರಣ ಪೋಷಕರ ವಶಕ್ಕೆ ನೀಡಿರುವ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಮಾತ್ರ ಟ್ರ್ಯಾಕ್‌ಚೈಲ್ಡ್ ಪೋರ್ಟಲ್‌ನಲ್ಲಿ ಮಕ್ಕಳ ಮಾಹಿತಿಯನ್ನು ಅಳವಡಿಸಲು ಸೂಚಿಸಿದೆ. ಸದರಿ ಮಾಹಿತಿಯನ್ನು ದಿನಾಂಕ: 08-08-2020ರೊಳಗಾಗಿ ಅಳವಡಿಸಿ ವರದಿ ಸಲ್ಲಿಸುವುದು.

ತಮ್ಮ ವಿಶ್ವಾಸಿ,
05.08.2020
ನಿರ್ದೇಶಕರು
ಸಮಗ್ರ ಮಕ್ಕಳ ರಕ್ಷಣಾ ಯೋಜನೆ
ಬೆಂಗಳೂರು.